(SRI T. SUBRAMANYA)

The collection of octroi for the last three years is as follows:—

	Year	*Copra*	*Cocoanut*
(1)	1955-56	14,162.32	2,118.72
(2)	1956-57	17,075.65	1,936.76
(3)	1957-58	16,706,46	1,877.07

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಳೆದ ಮೂರು ವರ್ಷಗಳಿಂದ ಸುಮಾರು 21, 19, 18 ಸಾವಿರ ರೂಪಾಯಿಗಳಗಟ್ಟಲೆ ತೆಂಗಿನಕಾಯಿ ಮತ್ತು ಕೊಬ್ಬರಿಯ ಮೇಲೆ ಸುಂಕವನ್ನು ನಗರ ಪಾಲಿಕೆಯವರು ವಸೂಲುಮಾಡಿರುತ್ತಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಇದರಿಂದ ರೈತರಿಗೇನಾದರೂ ಅನುಕೂಲವನ್ನು ನಗರಪಾಲಿಕೆಯವರು ಮಾಡಿದ್ದಾರೆಯೇ ?

†ಶ್ರೀ ಟಿ. ಸುಬ್ರಹ್ಮಣ್ಯ.—ಎಲ್ಲ ಅನುಕೂಲಗಳನ್ನು ಎಂದರೆ, ರಸ್ತೆ, ನೀರು, ದೀಪ, ಮುಂತಾದ ಸೌಕರ್ಯಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವ್ಯವಸಾಯದ ಉತ್ಪನ್ನದ ಮೇಲೆ ಇಷ್ಟೊಂದು ಸುಂಕಹಾಕಿ ಯಾವುದರಿಂದ ಸುಂಕವನ್ನು ವಸೂಲುಮಾಡುತ್ತೀನೋ ಅದಕ್ಕೇ ಖರ್ಚುಮಾಡುವುದು ಉತ್ತಮವಲ್ಲವೆಂದು ಭಾವಿಸಿದ್ದೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಮುನಿಸಿಪಾಲಿಟಿಯವರು ಆಕ್ಟ್ಪ್ರಯಿ ಹಾಕುತ್ತೇವೆಂದು ಹೇಳಿದರೆ ಸರ್ಕಾರದವರು ಅದಕ್ಕೆ ಪರ್ಮಿಷ್ಷ್ ಕೊಡುತ್ತಾರೆ.

Sri M. RAMAPPA.—May I know the exact provision under which octroi is levied ?

Mr. SPEAKER.—Please refer to the Municipal Act.

Sri M. RAMAPPA.—I have put that question specifically. Is the Hon'ble Minister personally examining the question that this levy is legal ?

Sri T. SUBRAMANYA.—I have not examined it but the Government have examined it at the time of the imposition

Sri M. RAMAPPA.—May I bring to the notice of the Hon'ble Minister that it is an illegal levy and request him to examine it ?

Sri T. SUBRAMANYA.—It has been examined and found to be legal.

ಶ್ರೀ ಎಚ್. ಜಿ. ನರಸಿಂಹೇಗೌಡ.—ತಿಪಟೂರು ಮುನಿಸಿಪಾಲಿಟಿಯವರು ತೆಂಗಿನಕಾಯಿ ಮತ್ತು ಕೊಬ್ಬರಿಗಳ ಮೇಲೆ ಸುಂಕ ಹಾಕಿದ್ದು ಕಾನೂನಿನಿಗೆ ವಿರೋಧವೆಂಬುದಾಗಿ ವಾದವಿವಾದಿದ್ದರೂ ಸರ್ಕಾರದವರು ಆ ವಿಷಯವನ್ನು ಇನ್ನೂ ಪರಿಶೀಲನೆ ಮಾಡಿಸೆಯೇ ಇರಲು ಕಾರಣವೇನು ?

ಶ್ರೀ ಟಿ. ಸುಬ್ರಹ್ಮಣ್ಯ.—ಎಲ್ಲರಿಗೂ ಅದರಲ್ಲಿ ಒಂದು ಪ್ರಿಜುಮ್ಷ್ಷ್ ಇದೆ. ಆರೀತಿ ಮನವಿ ಬಂದಮ್ಲಿ ನಿಜ. ಪರಿಶೀಲನೆಮಾಡಿದ್ದೂ ಆಯಿತು. ಅದು ಸಾಧುವಾಗಿದೆಯೆಂದು ತೀರ್ಮಾನ ಮಾಡಿದ್ದೇವೆ.

Mr. SPEAKER.—Government is not concerned with that.

ಶ್ರೀ ಎಚ್. ಜಿ. ನರಸಿಂಹೇಗೌಡ.—ವ ಎನಿಸಿಪಾಲಿಟಿಯವರು ಲಕ್ಷಾಂತರ ರೂಪಾಯಿಗಳನ್ನು ಆ ಮೂಲಕ ತೆರಿಗೆದಾರರಿಂದ ಸೆನ್ ತೆಗೆದುಕೊಂಡರೂ ರೇಟ್ ಪೇಯರ್ಸಿಗೆ ಯಾವತರಹ ಸಹಾಯವನ್ನೂ ಮಾಡಲಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಬೇಕಾದಷ್ಟು ಸಹಾಯಗಳನ್ನು ಮಾಡಿದ್ದಾರೆ.

Visit of the President of India to Melkote Town.

*Q.—15. Sri B. CHAMIAH (Pandavapura).—

Will the Government be pleased to state :—

(*a*) when the President of India visited Melkote town in Pandavapura taluk ;

(*b*) the amount sanctioned by the Municipality towards the expenses during his visit and the purpose for which this amount was spent ;

(*c*) whether there was any misappropriation of this amount and if so the action taken by Government in the matter ?

A.—Sri T. SUBRAMANYA (Minister for Law, Labour and Local Government).—

(*a*) On 21st August, 1954.

(*b*) A sum of Rs. 674-6-9 was sanctioned by the Town Municipality, Melkote, for the expenses in connection with the visit.

(*c*) Out of this amount, a sum of Rs. 224-6-9 was misappropriated and the Deputy Commissioner, Mandya, is taking action in the matter.

Sri T. SUBRAMANYA.—The words "it is alleged" have to be added after 'was' in clause (*c*).

An HON'BLE MEMBER.—Who is the person referred to here?

Mr. SPEAKER.—I do not allow that question.

ಶ್ರೀ ಬಿ. ಚಾಮಯ್ಯ.—ಹಣದುರುಪಯೋಗಮಾಡಿದ್ದಾರೆಂಬ ಆಪಾದನೆಗೆ ಗುರಿಯಾಗಿರತಕ್ಕವರ ಹುದ್ದೆಯೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಹುದ್ದೆಯಲ್ಲಿರತಕ್ಕವರು.

ಶ್ರೀ ಬಿ. ಚಾಮಯ್ಯ.—14ನೆಯ ನಂಬರಿನ ಪ್ರಶ್ನೆಯಲ್ಲಿ ಸೂಚಿಸಿರತಕ್ಕ ಪ್ರೆಸಿಡೆಂಟರೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಹೌದು, ಅದೇ ಮನುಷ್ಯರು.